



ಕೂಡಲೇ ತನ್ನೆದುರು, ಈ ಆಸ್ತಿಯ ಬಗ್ಗೆ ನನಗಿರುವ ಹಕ್ಕನ್ನು ಬಿಡುತ್ತಿದ್ದೇನೆ ಎಂದು ಸ್ಪಷ್ಟಪಡಿಸಿದ್ದರು. ಯಾವ ಆಸ್ತಿಗೆ ಬಾಪೂ ಅವರು ಸ್ವೇಚ್ಛೆಯಿಂದ ತಮ್ಮ ಹಕ್ಕನ್ನು ತ್ಯಜಿಸಿದ್ದರೋ, ಈಗ ಆ ಆಸ್ತಿಯ ಮೇಲೆ ಉಳಿದ ಸಹೋದರರ ಹಕ್ಕಿದೆ ಎಂಬುದು ತನ್ನಷ್ಟಕ್ಕೇ ತಾನೇ ಸ್ಪಷ್ಟವಾಗುವುದು. ಈಗ ಒಂದು ವೇಳೆ ಶಾಮಲದಾಸರು ಈ ಆಸ್ತಿಯನ್ನು ಉತ್ತರಾಧಿಕಾರಿಯಾಗಿ ಮಾರಾಟ ಮಾಡಲು ಬಯಸಿದರೆ, ಠಾಕೂರರು ಅವರನ್ನು ತಡೆಯಲು ಹೇಗೆ ಸಾಧ್ಯ? ತಾನು ಠಾಕೂರರಿಗೆ ಕೊಡಬೇಕಾದದ್ದು ತನ್ನ ವೈಯಕ್ತಿಕ ಸಾಲವಾಗಿದೆ. ಇದು ಠಾಕೂರರು ಮತ್ತು ಹರಿಲಾಲನ ನಡುವಿನ, ಇಬ್ಬರು ವ್ಯಕ್ತಿಗಳ ವೈಯಕ್ತಿಕ ಸಂಗತಿ. ಇದಕ್ಕೆ ಶಾಮಲದಾಸರು ಶಿಕ್ಷೆಯನ್ನೇಕೆ ಅನುಭವಿಸಬೇಕು? ಇದೇ ನ್ಯಾಯ, ಇದೇ ವಾಸ್ತವಿಕತೆ. ಇದನ್ನು ಹೊರತುಪಡಿಸಿದರೆ ಬೇರಾವ ವ್ಯವಹಾರವೂ ಅನೀತಿ, ಅನ್ಯಾಯ ಮತ್ತು ಅಧರ್ಮವೆಂದು ಕರೆಸಿಕೊಳ್ಳುತ್ತದೆ. ಹರಿಲಾಲ ಒಂದು ನಿರ್ಧಾರಕ್ಕೆ ಬಂದ. ಯಾವ ಆಸ್ತಿಗೆ ಬಾಪೂ ಅವರು ತಮ್ಮ ಹಕ್ಕನ್ನು ಬಿಟ್ಟುಕೊಟ್ಟಿದ್ದರೋ, ಆ ಆಸ್ತಿಗೆ ನನ್ನ ಹಕ್ಕಿನ ಪ್ರಶ್ನೆಯೇ ಬರುವುದಿಲ್ಲ. ಬಾಪೂ ಅವರ ಒಪ್ಪಿಗೆಯಲ್ಲಿಯೇ ನನ್ನ ಒಪ್ಪಿಗೆ ಸಹಜವಾಗಿಯೇ ಬರುತ್ತದೆ.

ಆದರೆ ದಸ್ತಾವೇಜುಗಳ, ದಾಖಲೆಗಳ ಕೆಲಸವನ್ನು ಪಕ್ಕಾ ಮಾಡುವ ಉದ್ದೇಶದಿಂದ ಠಾಕೂರರು, ಹರಿಲಾಲ ಸಹ ರಾಜಕೋಟಕ್ಕೆ ಬಂದು ಕಚೇರಿಯ ದಾಖಲೆಗಳಿಗೆ ರುಜು ಮಾಡಬೇಕು ಎಂದು ಆಗ್ರಹಿಸುತ್ತಿದ್ದರು. ಆದರೆ ಹರಿಲಾಲನಿಗೆ ಇದು ತುಂಬಾ ಕಷ್ಟದ ಕೆಲಸವಾಗಿತ್ತು. ಅವನ ಬಳಿ ರಾಜಕೋಟಕ್ಕೆ ಹೋಗಲು ರೈಲು ಟಿಕೆಟ್ ಕೊಳ್ಳಲು ಸಹ ಹಣವಿರಲಿಲ್ಲ. ಕಡೆಗೆ ಅವನು ಸೋತು ಶಾಮಲದಾಸರಿಗೆ ಪತ್ರವನ್ನು ಬರೆದ–

'ಭೈಯ್ಯಾ, ಟಿಕೆಟ್ ಕೊಳ್ಳಲು ಹಣವನ್ನು ಕಳುಹಿಸಿದರೆ ನಾನು ಬಂದು ರುಜು ಮಾಡುತ್ತೇನೆ.'

ಈ ರೀತಿಯಲ್ಲಿ ಹಣವನ್ನು ಯಾಚಿಸುವ ಹರಿಲಾಲನ ಪರಾಕ್ರಮ ಶಾಮಲದಾಸರಿಗೆ ಹೊಸದೇನೂ ಆಗಿರಲಿಲ್ಲ. ಅಲ್ಲದೆ ಶಾಮಲದಾಸರಿಗೆ, ಹರಿಲಾಲ ಇದುವರೆಗೆ ಸಂಬಂಧಿಕರಲ್ಲಿ ಹಣವನ್ನು ತೆಗೆದುಕೊಳ್ಳುವುದಕ್ಕೆ ಮಾತ್ರ ವ್ಯವಹಾರ ಮಾಡಿದ್ದಾನೆ ಎಂಬುದು ತಿಳಿದಿತ್ತು. ಇದು ಹರಿಲಾಲ ತಮ್ಮಿಂದ ಹಣ ವಸೂಲು ಮಾಡುವ ಹೊಸ ನಮೂನೆಯಾಗಿದೆ ಎಂದು ಶಾಮಲದಾಸರಿಗೆ ಅನ್ನಿಸಿತು. ಅವರ ಕೆಲಸಕ್ಕೆ ಅಡ್ಡಿಯಾಗಿತ್ತು, ಒಂದು ವೇಳೆ ಅವರು ಹರಿಲಾಲನ ಮಾತನ್ನು ಒಪ್ಪದಿದ್ದರೆ, ಹರಿಲಾಲನಿಗೆ ತಾನು ಬರದಿರುವುದಕ್ಕೆ ನೆಪವೊಂದು ಸಿಕ್ಕಿದಂತಾಗುತ್ತದೆ. ಶಾಮಲದಾಸರು ಹೆದರುತ್ತಲೇ ಹರಿಲಾಲನಿಗೆ ಮನಿಆರ್ಡರ್ ಮೂಲಕ ನೂರು ರೂಪಾಯಿಯನ್ನು ಕಳುಹಿಸಿದರು.

ಹರಿಲಾಲ ರೈಲು ಟಿಕೆಟಿಗೆ ಮಾತ್ರ ಹಣವನ್ನು ಯಾಚಿಸಿದ್ದ. ಈ ನೂರು ರೂಪಾಯಿಗಳು ತುಂಬಾ ಹೆಚ್ಚಾಯಿತು ಎಂದು ಅವನಿಗೆ ಅನ್ನಿಸಿತು. ಕಶ್ಮೀರಿ ಹೊಟೇಲ್‌ನ ಬಾಡಿಗೆ ಸಹ ಸಾಕಷ್ಟು ಏರಿತ್ತು. ಈಗ ಅವನಿಗೆ ಊಟ ಮತ್ತು ಮದ್ಯ ಸಾಲದ ರೂಪದಲ್ಲಿ ಸಿಗುವುದು ಸಹ ನಿಂತಿತ್ತು. ಅಲ್ಲದೆ ಈಗ ಅವನಿಗೆ ಅಲ್ಲಿರುವುದು ಸಹ ಕಷ್ಟವಾಗಿತ್ತು.

ಈಗ ಎಲ್ಲಿಗೆ ಹೋಗುವುದು, ಏನು ಮಾಡುವುದೆಂಬ ಯೋಚನೆಯಲ್ಲಿ ವ್ಯಗ್ರನಾಗಿದ್ದ. ಆ ನೂರು ರೂಪಾಯಿಗಳಲ್ಲಿ ಸಾಧ್ಯವಾದಷ್ಟು ಸಾಲವನ್ನು ಚುಕ್ತ ಮಾಡಿ, ರಾಜಕೋಟಕ್ಕೆ ಟಿಕೆಟ್ ಖರೀದಿಸಿದ. ಸಾಲ ತೀರಿಸಲು ನೂರು ರೂಪಾಯಿಗಳು ಸಾಕಾಗುತ್ತಿರಲಿಲ್ಲ. ತಾನು ಇಲ್ಲಿಗೆ ಮರಳಿ ಬಂದು ಸಾಲವನ್ನು ಯಾವಾಗ ತೀರಿಸಲು ಸಾಧ್ಯ ಎಂಬುದು ಸಹ ಅನಿಶ್ಚಿತವಾಗಿತ್ತು. ಕೊಡಬೇಕಾದವರಿಗೆ ಅಲ್ಪಸ್ವಲ್ಪ ಹಣವನ್ನು ಕೊಡಲು ಮನೆಯಲ್ಲಿದ್ದ ಸಾಮಾನುಗಳ ಕಡೆಗೆ ಅವನ ದೃಷ್ಟಿ ಹರಿಯಿತು. ಕೊಡದಂಥ ವಸ್ತುಗಳೆಂದರೆ ಒಂದು ಫೌಂಟೇನ್ ಪೆನ್ ಮತು ಜೇಬಿನಲ್ಲಿಟ್ಟು ಕೊಳ್ಳುವ ಗಡಿಯಾರ ಮಾತ್ರವಾಗಿದ್ದವು! ಅವನ ದೃಷ್ಟಿ ಈಗ ಟಿನ್ ಬಾಕ್ಸ್ ಮತ್ತು ಹಿತ್ತಾಳೆ ಲೋಟದ ಮೇಲೆ ಬಿತ್ತು. ಈಗ ಅವನಿಗೆ ಈ ವಸ್ತುಗಳ ಅಗತ್ಯವೇನಿದೆ? ಹರಿಲಾಲ ಒಂದು ಚೀಲದಲ್ಲಿ ತನಗೆ ಬೇಕಾದ ಬಟ್ಟೆಗಳನ್ನು ತುರುಕಿಕೊಂಡ... ತನ್ನ ಶೂನ್ಯ ಕಣ್ಣುಗಳಿಂದ ಭಗವದ್ಗೀತೆಯನ್ನು ನೋಡಿದ. ಅದರ ಕೆಲವು ಪುಟಗಳನ್ನು ತಿರುವಿ ಹಾಕಿದ. ನಂತರ ಅದನ್ನೂ ತನ್ನ ಚೀಲದಲ್ಲಿಟ್ಟುಕೊಂಡ. ನಿಧನಳಾದ ಹೆಂಡತಿ ಗುಲಾಬಳ ಭಾವಚಿತ್ರ ಈ ಮೊದಲೇ ಪೆಟ್ಟಿಗೆಯಲ್ಲಿತ್ತು. ಭಾವಚಿತ್ರಕ್ಕೆ ಹಾಕಿಸಿದ್ದ ಫ್ರೇಮನ್ನು ತೆಗೆದು ಅವಳ ಭಾವಚಿತ್ರವನ್ನು ಮಾತ್ರ ಜೇಬಿನಲ್ಲಿಟ್ಟುಕೊಂಡ. ಆ ಫ್ರೇಮನ್ನು ರದ್ದಿ ಸಾಮಾನುಗಳೊಂದಿಗೆ ಮಾರಲು ಬದಿಗಿಟ್ಟ.

ಸಾಮಾನುಗಳನ್ನು ಮಾರಿದ ನಂತರ ಬಂದ ಹಣದಲ್ಲಿ ಸ್ವಲ್ಪ ಸಾಲವನ್ನು ತೀರಿಸಿದ. ನಂತರ ಹರಿಲಾಲ ಸುಮಾರಾಗಿ ದಾರಿದ್ರ್ಯದ ಸ್ಥಿತಿಯಲ್ಲಿ ರಾಜಕೋಟಕ್ಕೆ ಹೋಗಲು ರೈಲು ಹತ್ತಿದ. ಆಗ ಅವನು ತನ್ನ ಚೀಲದಲ್ಲಿ ಎರಡು ಮೂರು ಮದ್ಯದ ಬಾಟಲಿಗಳನ್ನಿಟ್ಟುಕೊಳ್ಳಲು ಮರೆತಿರಲಿಲ್ಲ.

## ಮೂವತ್ತು

ಹರಿಲಾಲನ ರೈಲು ಖರ್ಚಿಗೆ ಹಣವನ್ನು ಕಳುಹಿಸುವಾಗ ಶಾಮಲದಾಸರ ಮನಸ್ಸಿನಲ್ಲಿ, ಈ ನೂರು ರೂಪಾಯಿಗಳು ಕೈಬಿಟ್ಟು ಹೋದವು ಎಂದು ದುಃಖವಾಗಿತ್ತು. ಆಸ್ತಿಗೆ ಸಂಬಂಧಿಸಿದ ದಾಖಲೆಗಳು ಸಿದ್ಧವಾದಾಗ ಮಾತ್ರ ಸಮಸ್ಯೆ ಎದುರಾಗುವುದು, ಆದರೆ ಈ ಅನುಮಾನಕ್ಕೆ ವಿರುದ್ಧವಾಗಿ ಹರಿಲಾಲ ಅವರೆದುರು ಬಂದು ನಿಂತಾಗ ಅವರಿಗೆ ಆಶ್ಚರ್ಯವಾಯಿತು, ಅವರು ನೆಮ್ಮದಿಯಿಂದ ಉಸಿರಾಡಿದರು. ಅವರಿಗೆ ಹರಿಲಾಲನ ನಡೆ ನುಡಿ ಮತ್ತು ಅವನು ಬದುಕುತ್ತಿದ್ದ ರೀತಿ ಮೊದಲೇ ತಿಳಿದಿತ್ತು. ಹರಿಲಾಲ ಈಗ ಯಾವ ಪರಿಸ್ಥಿತಿಯಲ್ಲಿ ಅವರ ಅಂಗಳದಲ್ಲಿ ನಿಂತಿದ್ದನೋ ಅದನ್ನು ನೋಡಿ ಅವರಿಗೆ, ಹರಿಲಾಲನ ಬಗ್ಗೆ ಇದುವರೆಗೆ ಯಾವಯಾವ ಸುದ್ದಿಗಳು ಲಭಿಸಿದ್ದವೋ, ಅವು ನಿಜವಾಗಿದ್ದಾಗ್ಯೂ ಅಪೂರ್ಣ ಸಹ ಆಗಿದ್ದವು ಎಂದು ಅನ್ನಿಸಿತು. ಕೊಳಕು ಪಂಚೆ, ಅಷ್ಟೇ ಕೊಳಕಾದ ವಾಸ್ಕೆಟ್ ಮತ್ತು ಟೋಪಿಯನ್ನು ಹರಿಲಾಲ ಧರಿಸಿದ್ದ. ಭುಜದ ಬಳಿ ಕೋಟು ಹರಿದಿತ್ತು, ಶರ್ಟಿನ ಕಾಲರ್ ಹರಿದು, ಅದರ ಚೂರು ಹೊರಗೆ ಇಣಿಕಿ ನೋಡುತ್ತಿತ್ತು. ಕಾಲುಗಳಲ್ಲಿ ಅಗ್ಗದ ಚಪ್ಪಲಿಯಿತ್ತು, ಕೈಯಲ್ಲಿ ಒಂದು ದೊಡ್ಡ ಚೀಲವಿತ್ತು.

'ಹರಿಲಾಲ್ ಭೈಯ್ಯಾ!' ಶಾಮಲದಾಸರು ಹರಿಲಾಲನನ್ನು ಸ್ವಾಗತಿಸಿದರು, 'ಯಾವಾಗ ಬಂದಿರಿ? ನಿಮ್ಮ ಲಗ್ಗೇಜು ಎಲ್ಲಿದೆ?'

'ನಾನು ಸ್ಟೇಷನ್‌ನಿಂದ ನೇರವಾಗಿ ಇಲ್ಲಿಗೆ ಬರುತ್ತಿದ್ದೇನೆ, ಶಾಮಲದಾಸ್‌ಜೀ!' ಹರಿಲಾಲ ಮೆಲ್ಲನೆ ನಕ್ಕ, 'ನನಗೆ ಲಗ್ಗೇಜ್ ಎಲ್ಲಿದೆ? ನೋಡಿ, ಇದೇ ನನ್ನ ಲಗ್ಗೇಜು' ಹರಿಲಾಲ ತನ್ನ ಚೀಲವನ್ನು ಗೂಟಕ್ಕೆ ನೇತು ಹಾಕಿದ.

'ಠಾಕೂರ್ ಸಾಹೇಬರೊಂದಿಗೆ ಮಾತನಾಡಿ ನಿಮ್ಮ ಮಾರಾಟದ ಪತ್ರಗಳನ್ನು ಪಕ್ಕಾ ಮಾಡಿಸುತ್ತೇನೆ. ಅಲ್ಲಿಗೆ ನನ್ನ ಕೆಲಸ ಮುಗಿಯಿತು.'

'ಭೈಯ್ಯಾ, ಆ ಕೆಲಸ ಇರಲಿ, ಈಗ ನೀವು ತುಂಬಾ ದಣಿದಿದ್ದೀರ. ಮೊದಲು ವಿಶ್ರಾಂತಿ ಪಡೆಯಿರಿ' ಶಾಮಲದಾಸರು ವಿವೇಕದಿಂದ ಹೇಳಿದರು. ಹರಿಲಾಲ ಬಂದಿದ್ದನ್ನು ನೋಡಿ ಹಾಗೂ ಅವನ ಮಾತನ್ನು ಕೇಳಿ ಅವರ ಮುಖದಲ್ಲಿದ್ದ ಚಿಂತೆ ದೂರವಾಗಿತ್ತು.

ಅಂದು ಸಂಜೆಯೇ ಹರಿಲಾಲ, ಶಾಮದಾಸರೊಂದಿಗೆ ಠಾಕೂರ್ ಸಾಹೇಬರನ್ನು ಭೇಟಿಯಾದ. ಹರಿಲಾಲ ತಮ್ಮೆದುರು ಹೀಗೆ ಬಂದು ನಿಲ್ಲುತ್ತಾನೆಂದು ಠಾಕೂರರು ಕನಸಿನಲ್ಲೂ ಎಣಿಸಿರಲಿಲ್ಲ.

'ಠಾಕೂರ್ ಸಾಹೇಬರೇ!' ಹರಿಲಾಲ ದೃಢ ಮನಸ್ಸಿನಿಂದ ಹೇಳಿದ, 'ಗಾಂಧೀಜಿಯವರ ಆಸ್ತಿಯನ್ನು ಮಾರಲು ಶಾಮಲದಾಸರಿಗೆ ಪೂರ್ಣ ಹಕ್ಕಿದೆ. ನಮ್ಮ ಬಾಪೂಜಿಯವರು ಈ ಆಸ್ತಿಯ ಹಕ್ಕನ್ನು ಎಂದೋ ಬಿಟ್ಟುಕೊಟ್ಟಿರುವ ವಿಷಯ ನಿಮಗೆ ತಿಳಿದಿರಬಹುದು.'

'ನಿಜ, ಆದರೆ ಇದು ಪೂರ್ವಿಕರು ಸಂಪಾದಿಸಿದ ಆಸ್ತಿ. ಇದರ ಮೇಲೆ ನಿನ್ನ ಹಕ್ಕು ಇದ್ದೇ ಇರುವುದು.'

'ಠಾಕೂರ್ ಸಾಹೇಬರೇ, ಯಾವ ಆಸ್ತಿಯನ್ನು ಹಕ್ಕನ್ನು ನನ್ನ ತಂದೆಯವರು ಬಿಟ್ಟುಕೊಟ್ಟಿದ್ದಾರೋ, ಆ ಆಸ್ತಿ ನನ್ನದು ಎಂದು ಹೇಳುವ ಹಕ್ಕು ನನಗಿಲ್ಲ' ಹರಿಲಾಲ ಸಹಜವಾಗಿಯೇ ಹೇಳಿದ, 'ಒಂದು ವೇಳೆ ನಿಮ್ಮ ಕಾನೂನು ಪ್ರಕಾರ ಇಂಥ ಹಕ್ಕು ನನಗೆ ಸಿಕ್ಕರೂ, ನಾನು ಆ ಹಕ್ಕನ್ನು ಬಿಟ್ಟುಕೊಡುತ್ತಿದ್ದೇನೆ.'

'ಆದರೆ ನೀನು ಹತ್ತು ಸಾವಿರ ರೂಪಾಯಿಗಳ ಸಾಲವನ್ನು ಕೊಡಬೇಕಲ್ಲ, ಅದಕ್ಕೇನು ಮಾಡುತ್ತೀಯ?' ಠಾಕೂರರು ಮೂಲ ಉದ್ದೇಶಕ್ಕೆ ಬಂದರು.

'ಅದಕ್ಕಾಗಿ ನಾನು ನಿಮಗೆ ಕೃತಜ್ಞನಾಗಿದ್ದೇನೆ. ಆದರೆ ಈ ಸಾಲದ ವ್ಯವಹಾರ ನಮ್ಮಿಬ್ಬರ ನಡುವೆ ನಡೆದಿತ್ತು. ಕಬಾ ಗಾಂಧಿಯವರ ಆಸ್ತಿ ರಾಜ್ಯದ ದಾಖಲೆಗಳಿಗೆ ಸಂಬಂಧಿಸಿದ ವಿಷಯವಾಗಿದೆ. ನಿಮ್ಮ ಹಣವನ್ನು ಶುದ್ಧ ರೂಪದಲ್ಲಿ ನಿಮಗೆ ಕೊಡುವ ಜವಾಬ್ದಾರಿ ನನ್ನದು. ನೀವು ನನ್ನ ಕಷ್ಟದ ಕಾಲದಲ್ಲಿ ನನಗೆ ಸಹಾಯವನ್ನು ಮಾಡಿದ್ದೀರಿ,